ಮಾಡಿಕೊಂಡು ಸಂಸಾರ ಆರಂಭಿಸಿದೆವು. ಶಶಿಧರ ಈ ಬೆಳವಣಿಗೆಯಿಂದ ಹತಾಶನಾಗಿದ್ದ ಎಂಬುದು ನಾಲ್ಕು ತಿಂಗಳು ಕಳೆದಮೇಲೆ ನನಗೆ ಗೊತ್ತಾಯ್ತು. ಒಂದು ವರ್ಷ ಕಳೆಯುವ ಮೊದಲೇ ನಮ್ಮಿಬ್ಬರ ಮಧ್ಯೆ ವಿರಸ. ಎರಡು ವರುಷಗಳು ಹೇಗೋ ಉರುಳಿದವು. ನಮ್ಮಿಬ್ಬರ ಸಂಬಂಧ ಮತ್ತಷ್ಟು ಹದಗೆಟ್ಟಿತ್ತು. ಒಂದು ದಿನ ಶಶಿಧರ ಮನೆ ತೊರೆದು ಹೋದ. ಅವನು ನನ್ನನ್ನು ಬಿಟ್ಟು ಹೋದಾಗ ನನ್ನ ಮಡಿಲಲ್ಲಿ ಎಂಟು ತಿಂಗಳ ಮಗು ಚಂದನಾ ಇದ್ದಳು.

ಬಾಣಂತನ ಮಾಡಿಸಿಕೊಳ್ಳಬೇಕಾಗಿದ್ದ ನಾನು ಮಗುವನ್ನು ಎದೆಗೊತ್ತಿಕೊಂಡು ಬೆಂಗಳೂರು ಬಸ್ ಹತ್ತಿದೆ. ಸ್ನೇಹಿತೆ ರೂಪಾಳ ಸಹಾಯದಿಂದ ಈ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆರಂಭದಲ್ಲಿ ಸಂಬಳ ತುಂಬಾ ಕಡಿಮೆ. ಆದರೂ ಬೆಂಗಳೂರಿನಲ್ಲಿ ಕಾಲೂರಬೇಕಿತ್ತು. ಸ್ನೇಹಿತೆ ತನ್ನ ಸಂಬಂಧಿಕರ ಮನೆಯ ಔಟ್‌ಹೌಸನ್ನು ಬಾಡಿಗೆ ಕೊಡಿಸಿದಳು. ವರ್ಷದಿಂದ ವರ್ಷಕ್ಕೆ ಸಂಬಳ ಹೆಚ್ಚಿತು. ಪರಿಸ್ಥಿತಿ ಸ್ವಲ್ಪ ಸುಧಾರಿಸಿತು" ಎಂದ ಸಂಜನಾಳ ಕಣ್ಣಾಲಿಗಳು ತುಂಬಿಕೊಂಡಿದ್ದವು. ಮಾತು ನಿಲ್ಲಿಸಿ ಕಣ್ಣೊರೆಸಿಕೊಂಡಳು.

ಒಂದು ವರ್ಷ ಹಿರಿಯಳಾಗಿರುವ ಸಹೋದ್ಯೋಗಿ ನಂದಿತಾಳ ಸ್ನೇಹ ಸಂಜನಾಳಿಗೆ ಸಿಕ್ಕಿತು. ನಂದಿತಾ ಬರಿಯ ಸ್ನೇಹಿತಳಷ್ಟೇ ಆಗಿರಲಿಲ್ಲ. ಅಕ್ಕ, ಬಂಧು, ಎಲ್ಲವೂ ಆದಳು. ಅವಳ ಪತಿ ಕೂಡ ಅಷ್ಟೇ ಉತ್ತಮ ವ್ಯಕ್ತಿ. ಸಮಯ ಸಂದರ್ಭಗಳಲ್ಲಿ ನಂದಿತಾಳೊಂದಿಗೆ ತನಗೆ ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಮೂರು ವರ್ಷ ತುಂಬಿದ ಮಗಳು ಚಂದನಾಳನ್ನು ಸಣ್ಣದೊಂದು ಖಾಸಗಿ ಶಾಲೆಗೆ ಸೇರಿಸಿದಳು. ನಂತರದ ಮೂರು ವರ್ಷಗಳು ಗೊತ್ತಾಗದಂತೆ ಕಳೆದುಹೋದವು. ಯಾರ ಬಳಿಯೂ ಕೈ ಚಾಚಲಿಲ್ಲ. ಯಾರಲ್ಲಿಯೂ ಬೇಡಿಕೊಳ್ಳಲಿಲ್ಲ. ಯಾರ ಸಹಾಯವೂ ಇಲ್ಲದೆ ಮಗಳನ್ನು ಬೆಳೆಸುತ್ತಾ ಬಂದಳು.

ಆದರೆ ಇಂದು ಶಶಿಧರನ ಧ್ವನಿ ಕೇಳಿದ ಮೇಲೆ ಅವಳ ನಿರ್ಧಾರ ಮೆಲ್ಲನೆ ಕರಗಿತು. ನೆನಪುಗಳು ಒಮ್ಮೆಲೇ ಅವಳನ್ನು ಮುತ್ತಿಕೊಂಡವು. ತಾನು ತುಂಬಾ ದುಡುಕಿ ಬಿಟ್ಟೆನಾ? ಆರು ವರ್ಷಗಳ ನಂತರ ಶಶಿಧರನ ಒಂದೇ ಒಂದು ಫೋನ್ ಕಾಲ್...

ಅವಳ ಇಡೀ ಆರು ವರ್ಷದ ದೃಢತೆ ತಣ್ಣಗಾಗತೊಡಗಿತು. ಮಗಳು ಶಿಶುವಿಹಾರಕ್ಕೆ ಸೇರಿಕೊಂಡಾಗ, ಮುಗ್ಧತೆಯಿಂದ ತನ್ನ ಅಪ್ಪ ಯಾರು ಎಂಬ ಪ್ರಶ್ನೆಗೆ ಶಶಿಧರನ ಫೋಟೊ ತೋರಿಸಿ ಇವರೇ ನಿನ್ನ ಅಪ್ಪ ಎಂದು ಹೇಳಿ ಸುಮ್ಮನಾಗಿಸಿದ್ದಳು. ಈಗ ಅದೇ ಅಪ್ಪ ಖುದ್ದಾಗಿ ಬರುತ್ತಿದ್ದಾನೆ. ತನ್ನ ಬದುಕೂ ಬದಲಾಗುತ್ತದೆ. ತನ್ನ ಚಂದನಾ ಇನ್ನು ಮುಂದೆ ಅಪ್ಪನೊಂದಿಗೆ ಇತರೆ ಮಕ್ಕಳಂತೆ ಆಟವಾಡುತ್ತಾಳೆ.

ನಂದಿತಾ ಸಂಜನಾಳ ಕೈಗಳನ್ನು ಮೃದುವಾಗಿ ಒತ್ತಿದಳು.

"ಒಳ್ಳೆಯದಾಗಲಿ ಸಂಜನಾ. ಇನ್ನಾದರೂ ನಿನ್ನ ಬದುಕಿಗೊಂದು ಭವಿಷ್ಯ ಅಂತ ಸಿಕ್ಕಿತಲ್ಲಾ. ದೇವರ ದಯೆ. ನಿನ್ನ ಶಶಿಧರನಿಗೆ ಈಗಲಾದರೂ ನಿನ್ನ ಅವಶ್ಯಕತೆ ಇದೆ ಅಂತ ಅರಿವಾಯ್ತಲ್ಲ."

ಸಂಜನಾಗೆ ಒಂದು ಸುಂದರವಾದ ಕನಸು ಕಾಣುತ್ತಿರುವ ಅನುಭವ. ಶಶಿಧರ ಮನೆಗೆ ಬರುತ್ತಿರುವುದು ಕನಸೋ ನನಸೋ ಎಂದು ಗಂಟೆಗೊಮ್ಮೆ ಸಂಶಯಪಡುತ್ತಿದ್ದಾಳೆ.

'ಇಲ್ಲ ಖಂಡಿತ ಅವನು ಬರುತ್ತಾನೆ. ಫೋನ್ ಮಾಡಿದ್ದು ಅವನೇನೆ. ಸುಮ್ಮನೆ ನಾನೇ ಅನುಮಾನ ಪಟ್ಟುಕೊಂಡು ಸಂಶಯ ಪಡುತ್ತಿದ್ದೇನೆ' ಎಂದು ಸ್ವಗತದಲ್ಲೇ ಸಮಾಧಾನ ಪಟ್ಟುಕೊಂಡಳು.

ಸಂಜೆ ಸ್ನೇಹಿತೆಯಿಂದ ಬೀಳ್ಕೊಂಡು ಮನೆಗೆ ಬರುವಾಗ ಗೆಳತಿಯ ಮನೆಯಲ್ಲಿ ಶಾಲೆಯಿಂದ